# ವಸಂತಾಗಮನ

ವಸಂತ ಋತು ನಿಧಾನವಾಗಿ ಭೂರಮೆಯ ಮೇಲೆ ಕಾಲಿಡುತ್ತಿದೆ. ಬೆಟ್ಟಗುಡ್ಡ, ಕುರುಚಲು ಕಾಡು, ಹೊಲಮಾರೆಗಳ ಬದುವಿನಲ್ಲಿ ಇದೀಗ ಎಲೆಯಿಲ್ಲದ ಮುತ್ತುಗದ ಮರದ ತುಂಬಾ ಕುಲುಮೆಯ ಕೆಂಡ ಸುರಿದಂತೆ ಹೂಗಳು ಅರಳಿವೆ. ವಸಂತ ಋತು ತನ್ನೊಡನೆ ಭೂಮಿಗೆ ಕರೆತರುವ ಮೊದಲ ಅತಿಥಿ ಮುತ್ತುಗದ ಹೂಗಳು. ಈ ಹೂಗಳು ನಡೆದ ಹೆಜ್ಜೆಗಳ ಮೇಲೆ ಪರಿಮಳ ಸೂಸುತ್ತಾ ಬರುವುದೇ ಜಾಲಾರ ಅಥವಾ ಜಾಲಾರಿ ಹೂ. ಬಯಲು ಸೀಮೆಯ ಗುಡ್ಡ ಹಾಗೂ ಕಾಡುಗಳಲ್ಲಿ ಹೆಚ್ಚಾಗಿ ಕಾಣಸಿಗುವ ಜಾಲಾರ ಹೂಗಳು ಪ್ರಕೃತಿಯ ಅಚ್ಚರಿಯ ಸೃಷ್ಟಿ! ಈ ಹೂಗಳು ಮಾಗುವ ಹೊತ್ತಿಗೆ ಕಾಣಿಸಿಕೊಳ್ಳುವುದೇ ಬೂರಗದ ಹೂವು. ನೋಡಲು ಆಕರ್ಷಕವಾಗಿ, ಗಾಢ ಕೆಂಪು ಬಣ್ಣದ ಈ ಹೂವು ಮಧುರಸ ಹೀರುವ ಹಕ್ಕಿಗಳ ಆಪ್ತ ಗೆಳೆಯ. ಇವುಗಳ ಜೊತೆಗೆ ಹೊಂಬಣ್ಣದಿಂದ ಕುಡಿಯೊಡೆಯುವ ಬೇವು, ನರುಗೆಂಪಿನ ಮಾವಿನ ಚಿಗುರು, ಇನ್ನೂ ಅನೇಕ ಹೆಸರು ತಿಳಿಯದ ಹತ್ತಾರು ಬಣ್ಣದ ಹೂಗಳು ವಸಂತ ಋತುವಿನೊಡನೆ ಬಂದು ನಮ್ಮ ಕಣ್ಣುಗಳನ್ನು ತುಂಬಿಕೊಳ್ಳುತ್ತವೆ. ಬಯಲು ಸೀಮೆಯ ಕಾಡಿನಲ್ಲಿ ಇಂತಹ ಹಲವು ಹೂಗಳ ಪರಿಮಳದಿಂದ ಸೊಗಯಿಸುವ ಪ್ರಕೃತಿಯ ಈ ಸೃಷ್ಟಿ ನೋಡಿಯೇ ಆನಂದಿಸಬೇಕು! ಪ್ರಕೃತಿಯ ಇಂತಹ ಚೇತೋಹಾರಿಯಾದ ಸಾನಿಧ್ಯವನ್ನು ಕುರಿತು ಕುವೆಂಪು ಹೇಳಿದ್ದು ನೆನಪಾಗುತ್ತಿದೆ: 'ನನಗೆ ನಿಸರ್ಗ ಬೇರೆಯಲ್ಲ, ದೇವರು ಬೇರೆಯಲ್ಲ!'

ಈ ಕಾಡು ಕುಸುಮಗಳಿಗೆ ಸ್ವಾತಂತ್ರ್ಯ, ಸುಂದರ ರೂಪ, ಪರಿಮಳ, ಬಣ್ಣ ಬಂದದ್ದು, ಆಯಾ ಪ್ರದೇಶದ ಮಣ್ಣು, ನೀರು, ಬೆಳಕು ಹಾಗೂ ಇವೆಲ್ಲವನ್ನೂ ಉಳಿಸಿಕೊಳ್ಳುವ ಮನುಷ್ಯರ ಮನಸ್ಸಿನ ನಿಸ್ವಾರ್ಥ ಪ್ರಾರ್ಥನೆಯಿಂದ! ಪ್ರಕೃತಿಗೆ ಮುಕುಟದಂತೆ ಇರುವ ಈ ವನಸುಮಗಳು ನಿಷ್ಕಲ್ಮಷ ಮನಸ್ಸಿನ ಮಕ್ಕಳಂತೆ. ಇಂತಹ ಮಕ್ಕಳನ್ನೇ ಕುರಿತು ಬಾಶು ಎನ್ನುವ ಕವಿ ಹೇಳಿದ: 'ಬಂದು ನೋಡಿ / ಇವೇ ಜಗತ್ತಿನ ನಿಜವಾದ ತಾಜಾ ಹೂವುಗಳು'

ಹೂವು ಮತ್ತು ಚಿಗುರಿನಿಂದ ತುಂಬಿತುಳುಕುವ ಪ್ರಕೃತಿಯನ್ನು ಮೀರಿಸುವ ಏಕಾಂತತೆ ಮತ್ತು ಶಾಂತಿಯ ತಾಣ ಲೋಕದಲ್ಲಿ ಮತ್ತೊಂದಿಲ್ಲ ಎನ್ನುವುದನ್ನು ವನಸುಮಗಳ ನಡುವಿನ ಸಾನಿಧ್ಯವು ಮತ್ತೆ ಮತ್ತೆ ನಿರೂಪಿಸುತ್ತಲೇ ಇದೆ. ಕೇಳಿಕೆಗಳ ಪ್ರಕಾರ ಬುದ್ಧದೇವ ಜನಿಸಿದ್ದು ಒಂದು ಜಾಲಾರ (ಸಾಲವೃಕ್ಷ) ಮರದ ಕೆಳಗೆ. ಸಿದ್ಧಾರ್ಥನಿಗೆ 'ಅರಿವು' ಮೈದೋರಿ 'ಬುದ್ಧ'ನಾದದ್ದೂ ಸಹ ವಸಂತ ಋತುವಿನ ಒಂದು ತುದಿಯಲ್ಲಿ. ನೈರಂಜನ ನದಿಯ ದಡದಲ್ಲಿದ್ದ ತರುಲತೆಗಳಿಂದ ಆವೃತ್ತವಾಗಿದ್ದ ಸುಂದರ ವನದ ನಡುವೆ. ಆದ್ದರಿಂದಲೇ ವಸಂತ ಋತು ಎನ್ನುವುದು ಅರಿವಿನ ಸ್ವರ್ಗದ ಹೆಬ್ಬಾಗಿಲು. ಇಂತಹ ಪ್ರಕೃತಿಯಿಂದಲೇ ಜೀವ ಪಡೆದಿದ್ದ ಚಿಲಿಯ ಕವಿ ನೆರೂಡ ಹೇಳಿದ 'ವಸಂತವೇ ಕ್ರಾಂತಿ'.

ಪ್ರಕೃತಿಯ ಪವಿತ್ರ ತಾಣದಲ್ಲಿ 'ಎಲ್ಲವೂ ನನ್ನದೇ' ಎನ್ನುವುದು ಒಂದು ಮನೋವೈಕಲ್ಯ. ಈ ವಿಕೃತ ಆಕಾಂಕ್ಷೆಯು ಪ್ರಕೃತಿಯನ್ನು ಹಾಗೂ ಮನುಕುಲವನ್ನು ಭವಿಷ್ಯದಲ್ಲಿ ಅಂಧಕಾರಕ್ಕೆ ತಳ್ಳುತ್ತದೆ. ಈ ಅರಿವು ಇದ್ದ ಕುವೆಂಪು ನಮ್ಮನ್ನು ಪ್ರಕೃತಿಯ ಲೋಕಕ್ಕೆ ಬರುವುದಾದರೆ, ಕರುಣೆ ಹಾಗೂ ಪ್ರೇಮದ ಹೃದಯದಿಂದ ಬನ್ನಿ ಎಂದು ಆಹ್ವಾನಿಸುತ್ತಾರೆ: 'ಕೊಲ್ವ ಬತ್ತಳಿಕೆ ಬಿಲ್ಲು ಬಾಣವನು / ಅಲ್ಲೆ ಇಟ್ಟು ಬಾ / ಬಿಂಕದುಕುತಿಯನು ಕೊಂಕುಯುಕುತಿಯನು/ ಎಲ್ಲ ಬಿಟ್ಟು ಬಾ'. ಸಂತನೊಬ್ಬನ ನುಡಿಯಂತಿರುವ ಈ ಕವಿತೆ ತನ್ನ ಭಾಷೆಯಾಚೆಗೆ ದಾಟಿ, ಮನುಷ್ಯನೊಳಗಿರುವ 'ನಾನು', 'ನನ್ನದು' ಎನ್ನುವ ಎಲ್ಲೆಯಿರದ ದಾಹ ಮತ್ತು ಕ್ರೌರ್ಯವನ್ನು ಮಣಿಸಿ, ಪ್ರಕೃತಿಯ ಸ್ವಾತಂತ್ರ್ಯವನ್ನು ಗೌರವಿಸುವ ವಿನಯವನ್ನು ಕಲಿಸುತ್ತದೆ.

ಪ್ರಕೃತಿಯ ಭಾಷೆಯನ್ನು ಅರ್ಥ ಮಾಡಿಕೊಳ್ಳದವರು ಕಲ್ಲುಹೃದಯದವರಾಗಿರುತ್ತಾರೆ. ಪ್ರಕೃತಿಯನ್ನು ತಮ್ಮ 'ಸೊತ್ತು' ಎಂದು ಭಾವಿಸಿರುವ ಇಂತಹ ಸ್ವಾರ್ಥಿಗಳ ಹಸ್ತಕ್ಷೇಪ ಇಂದು ಹೆಚ್ಚಾಗಿಯೇ ಇದೆ. ಇದೊಂದು ರೀತಿಯ ಪ್ರಕೃತಿಯ ಜೀವಿಸುವ ಹಕ್ಕುಗಳ ದಮನೀಕರಣ. ಇಂತಹ ವಿಕೃತಗಳಿಂದಾಗಿ ಮನುಕುಲ ಎಂದೂ ಕಂಡರಿಯದ, ಘೋರಾತಿಘೋರ ರೋಗರುಜಿನಗಳಿಗೆ, ವಿಪತ್ತುಗಳಿಗೆ ಈಡಾಗುತ್ತಿದೆ! ಹೀಗಿದ್ದೂ ನಮ್ಮೊಳಗಿರುವ ಸ್ವಾರ್ಥದ ರೋಗಕ್ಕೆ ಮದ್ದು ಕೊಡದೆ, ಪ್ರಕೃತಿಯ ವಿಪತ್ತುಗಳಿಂದ ತಪ್ಪಿಸಿಕೊಳ್ಳಲು, ಕೈಯಲ್ಲಿ ದೊಂದಿ ಹಿಡಿದು ಹುಲ್ಲಿನ ಗುಡಿಸಲಿಗೆ ಹೋದಂತೆ!

ಪ್ರಕೃತಿಗೆ ನಾವು ಮಾಡಬಹುದಾದ ದೊಡ್ಡ ಉಪಕಾರ ಎಂದರೆ, ಪ್ರಕೃತಿ ಹೇಗಿದೆಯೋ ಹಾಗೆಯೇ ಬಿಟ್ಟು, ತನಗೆ ದೊರೆತಿದ್ದನ್ನು ಮಾತ್ರ ಸ್ವೀಕರಿಸುವುದು. ಆಧುನಿಕ 'ಪರಿಸರವಾದ' ಹುಟ್ಟುವ ಮೊದಲೇ ನಮ್ಮ ಕಾಡಂಚಿನ ಸಮುದಾಯಗಳು, ಜನಸಾಮಾನ್ಯರು ಹಾಗೂ ಸಿದ್ಧ ಸಾಧಕರೆಲ್ಲಾ ಈ ತತ್ವದ ಮೇಲೆಯೇ ಬಾಳಿ ಬದುಕಿದರು.

ಪ್ರಕೃತಿ ಮನುಷ್ಯನನ್ನು ಹೊರತುಪಡಿಸಿ, ತನ್ನ ನಿತ್ಯದ ಒಡನಾಡಿಗಳನ್ನಾಗಿ ಇಟ್ಟುಕೊಂಡಿರುವ ಗಿಡಮರ, ಕಾಡು, ನದಿ, ಕಡಲು, ಪರ್ವತಗಳ ಮುಖದ ಮೇಲೆ ತನ್ನ ಪ್ರತಿಬಿಂಬವನ್ನು ಕಾಣುತ್ತಿರುತ್ತದೆ. ಅದನ್ನು ಮಬ್ಬುಗೊಳಿಸುವ ಪ್ರಯತ್ನವನ್ನು ಯಾರೂ ಮಾಡಬಾರದು! ಮನುಕುಲಕ್ಕೆ ಒಳಿತು ಮಾಡುತ್ತದೆ ಎಂದು ನಂಬಿರುವ ಅಭಿವೃದ್ಧಿಯ ಗರ್ಭದಲ್ಲೇ ಪ್ರಕೃತಿಯ ವಿರುದ್ಧದ ಕೇಡು ಜನ್ಮ ತಾಳಿದೆ. ಈಗ ಕೇಡು ಎಂಬುದೇ ಮೇಲುಗೈ ಪಡೆಯುತ್ತಿದೆ! ಈ ಕೇಡಿನ ಭಸ್ಮಾಸುರನ ಕೈಗಳು ಎಲ್ಲವನ್ನೂ ಸುಡುತ್ತಾ, ಕಟ್ಟಕಡೆಗೆ ತನ್ನನ್ನು ತಾನೇ ಸುಟ್ಟುಕೊಳ್ಳುವ ದಿನಗಳು ಬಹುದೂರವಿಲ್ಲ ಎಂದು ತಜ್ಞರು ಎಚ್ಚರಿಸುತ್ತಿದ್ದಾರೆ.

ಭವಿಷ್ಯದಲ್ಲಿ ಎದುರಾಗುವ ವಿನಾಶವನ್ನು ಮನಗಂಡೂ ಕವಿ ನೆರೂಡ ಹೇಳಿದ: 'ವಸಂತವನ್ನು ಯಾರೂ ತಡೆಯಲಾರರು...'

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಓದಿ ಮರುಳಾಗಬಾರದು, ಓದದೆಯೂ ಮರುಳಾಗಬಾರದು, ಓದಿ ಹುರುಳಾಗಬೇಕು.
  —ವಿ.ಕೃ. ಗೋಕಾಕ್
- ಶ್ರದ್ಧೆಯ ಅರ್ಥ ಮೂಢನಂಬಿಕೆಯಲ್ಲ.
  —ಸ್ವಾಮಿ ವಿವೇಕಾನಂದ
- ನಮ್ಮ ಗುಣಗಳ ನೆರಳೇ ನಮ್ಮ ಲೋಕಗಳು.
  —ಎಮರ್ ಸನ್
- ಶ್ರಮಜೀವಿಯಂತೆ ಕೆಲಸ ಮಾಡು. ವೇದಾಂತಿಯಂತೆ ಯೋಚಿಸು.
  —ಹೆನ್ರಿ ಬರ್ಗ್
- ಮನುಷ್ಯನನ್ನು ಕಡೆಗಣಿಸಿ ಮಾಡಿದ ಯಾವುದೇ ಸತ್ಕರ್ಮ ನಿರರ್ಥಕ, ಅಪ್ರಯೋಜಕ.
  —ಕೆ.ಎಸ್. ನಿಸಾರ್ ಅಹಮದ್
- ವ್ಯಕ್ತಿತ್ವ ಸಾಧನೆ ಹೊಸ ಯುಗದ ಬೀಜಮಂತ್ರ.
  —ರಂ.ಶ್ರೀ. ಮುಗಳಿ
- ಬದುಕಿ, ಇತರರನ್ನು ಬದುಕಲು ಬಿಡಿ ಎಂಬುದೇ ನಮ್ಮ ಜೀವನದ ಮಂತ್ರವಾಗಬೇಕು.
  —ಮಹಾತ್ಮ ಗಾಂಧೀಜಿ
- ಇನ್ನೊಬ್ಬನ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ, ನಮ್ಮದೇ ಹುಚ್ಚುತನ ನಮಗೆ ಕಾಣಿಸುತ್ತದೆಯೇ?
  —ಶಿವರಾಮ ಕಾರಂತ
- ಉತ್ತಮವಾದುದು ಶ್ರಮವಿಲ್ಲದೆ ಲಭಿಸದು. ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಅಲ್ಲ.
  —ಕುವೆಂಪು
- ಎಂತಹ ಕಷ್ಟ ಬಂದರೂ ಎದೆಗುಂದಬಾರದು. ಇದೇ ಸುಖಿಯಾಗಿರುವುದರ ರಹಸ್ಯ.
  —ದ.ರಾ. ಬೇಂದ್ರೆ